ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು

ಸಿ.ಸಿ. 1722/2022

ಸಾಕ್ಷಿಯ ಹೆಸರು	:-	ಶ್ರೀನಿವಾಸ
ತಂದೆ ಹೆಸರು	:-	ಸೋಮಶೇಖರ
ವಯಸ್ಸು	:-	32 ವರ್ಷ
ಉದ್ಯೋಗ	:-	ವ್ಯಾಪಾರ
ವಾಸಸ್ಥಳ	:-	ಲಗ್ಗೆರೆ

(ಸಾಕ್ಷಿಗೆ ದಿನಾಂಕಃ 07-07-2026 ರಂದು ಪ್ರಮಾಣ ವಚನ ಬೋಧಿಸಲಾಯಿತು)

ಮುಖ್ಯ ವಿಚಾರಣೆ

ಪಿರ್ಯಾದುದಾರರ ಪರಿಚಯ ನನಗೆ ಇರುತ್ತದೆ, ಆದರೆ ನಾನು ಅವರ ಬಳಿ ಯಾವುದೇ ಹಣಕಾಸಿನ ವ್ಯವಹಾರ ಮಾಡಿರುವುದಿಲ್ಲ, ಅವರ ಮಗ ಪ್ರಮೋದ್ ರವರ ಬಳಿ 2 ಲಕ್ಷ ರೂ. ಗಳ ಚೀಟಿಯನ್ನು 2020-21 ನೇ ಸಾಲಿನಲ್ಲಿ ಹಾಕಿದ್ದು, ಸದರೀ ಸಮಯದಲ್ಲಿ ಚಿಪೀಟಿ ಹಣದ ಭದ್ರತೆಗಾಗಿ ಎರಡು ಹಾಲಿ ಚೆಕ್ ಮತ್ತು ಒಂದು ಆಂಡಿಮ್ಯಾಂಡ್ ಪ್ರೊನೋಟ್ ನ್ನು ಪ್ರಮೋದ್ ರವರಿಗೆ ನೀಡಿದ್ದು, ಸದರೀಯವರು ಚೀಟಿ ವ್ಯವಹಾರ ಮುಗಿದ ಹಣ ಸಂಪೂರ್ಣ ಪಾವತಿಯಾದ ನಂತರ ನಾನು ಹೇಳಿದ ಖಾಲಿ ಚೆಕ್ ನ್ನು ನನಗೆ ಹಿಂದಿರುಗಿಸಿರುವುದಿಲ್ಲ, ನಾನು ಕಳೆದ 5-6 ವರ್ಷಗಳಿಂದ ಬೆಂಗಳೂರಿನಲ್ಲಿ ಕೋಳಿ ಅಂಗಡಿಯನ್ನು ಇಟ್ಟುಕೊಂಡು ಕೋಳೀ ವ್ಯಾಪಾರ ಮಾಡುತ್ತಿದ್ದು, ಊರಿಗೆ ಬಂದು ಚೆಕ್ ನ್ನು ವಾಪಸ್ಸು ಪಡೆದುಕೊಳ್ಳಲು ಆಗಿರುವುದಿಲ್ಲ. ಈ ಮಧ್ಯೆ ಪ್ರಮೋದ್ ರವರ ಮಾವ ದೇವರಾಜುರವರ ಹೆಸರನಲ್ಲಿ ಸಿಸಿ 388/2023 ರಂತೆ 5 ಲಕ್ಷ ರೂ.ಗಳಿಗೆ ಚೆಕ್ ಬೌನ್ಸ್‌ಪ್ರಕರಣವನ್ನು ದಾಖಲುಮಾಡಿಸಿದ್ದು ಇನ್ನೊಂದು ಚೆಕ್ ನ್ನು ಪ್ರಮಾದ್ ರವರ ತಂದೆ ಸಿದ್ದರಾಮುರವರ ಹೆಸರಿನಲ್ಲಿ 5 ಲಕ್ಷ ರೂ.ಗಳಿಗೆ ಚೆಕ್ ಬೌನ್ಸ್‌ಪ್ರಕರಣವನ್ನು ದಾಖಲು ಮಾಡಿರುತ್ತಾರೆ. ಈ ಬಗ್ಗೆ ನನಗೆ ಯಾವುದೇ ನೋಟೀಸ್ ಜಾರಿಯಾಗಿರುವುದಿಲ್ಲ ಆದುದರಿಂದ ಮೇಲೆ ಹೇಳಿದ ಅಂಶಗಳಿಗೆ ಪ್ರತ್ಯುತ್ತರ ನೀಡಲು ಸಾಧ್ಯವಾಗಿರುವುದಿಲ್ಲ. ಪಿರ್ಯಾದುದಾರರ ಜೊತೆ ಯಾವುದೇ ಹಣಕಾಸಿನ ವ್ಯವಹಾರವನ್ನು ನಾನು ಮಾಡಿಲ್ಲದೇ ಇದ್ದರೂ ಸಹ ನನ್ನ ವಿರುದ್ದ ಸುಳ್ಳು

ಪ್ರಕರಣವನ್ನು ದಾಖಲುಮಾಡಿರುತ್ತಾರೆ. ಆದ ಕಾರಣ ನನ್ನನ್ನು ಈ ಪ್ರಕರಣದಿಂದ ಬಿಡುಗಡೆ ಮಾಡಿಕೊಡಲು ಕೋರಿಕೊಳ್ಳುತ್ತೇನೆ.

ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ಸಮಯವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮದ್ದೂರು